# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

ಸಿ.ಸಿ. ನಂ.10/2009

ಚಾಸಾ-29/ಪ್ರಾಸಾ-1

| | | |
|---|---|---|
| ಹೆಸರು | ಃ- | ಹೆಚ್.ಎನ್. ಧರ್ಮೇಂದ್ರ |
| ತಂದೆ ಹೆಸರು | ಃ- | ಹೆಚ್.ಟಿ. ನಂಜಪ್ಪ |
| ವಯಸ್ಸು | ಃ- | 55 ವರ್ಷ |
| ವೃತ್ತಿ | ಃ- | ಎ.ಸಿ.ಪಿ., ಸಿಟಿ ಕ್ರೈಂ ಬ್ರಾಂಚ್, ಬೆಂಗಳೂರು. |
| ವಾಸ ಸ್ಥಳ | ಃ- | ಬೆಂಗಳೂರು |
| ದಿನಾಂಕ | ಃ- | 01.09.2022 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ ಃ

ದಿನಾಂಕ 23.03.2008 ರಿಂದ ದಿನಾಂಕ 07.07.2011 ರವರೆಗೆ ರಾಮನಗರ ಗ್ರಾಮಾಂತರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ದಿನಾಂಕ 26.06.2008 ರಂದು ಈ ಪ್ರಕರಣದ ಕಡತವನ್ನು ಚಾಸಾ-26 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ತನಿಖೆಯನ್ನು ಪರಿಶೀಲಿಸಿ, ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡೆನು. ಅದೇ ದಿನ ಕೃತ್ಯ ನಡೆದ ಸ್ಥಳ ಬಿ.ಎಂ. ರಸ್ತೆ, ಸಂಗಬಸವನದೊಡ್ಡಿಗೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿ, ಪಂಚರಾದ ಚಾಸಾ-2 ಮತ್ತು ಚಾಸಾ-8 ರವರನ್ನು ಬರಮಾಡಿಕೊಂಡು, ಪ್ರಕರಣದ ಪಿರ್ಯಾದುದಾರರಾದ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ, ಸ್ಥಳ ಪಂಚನಾಮೆಯನ್ನು ಬೆಳಗ್ಗೆ 8.00 ರಿಂದ 9.00 ಗಂಟೆಯ ನಡುವೆ ತಯಾರಿಸಿರುತ್ತೇನೆ. ಸ್ಥಳ ಪಂಚನಾಮೆಯನ್ನು

ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡತ್ತಿದ್ದು ಗುರುತಿಸುತ್ತೇನೆ. ಸ್ಥಳ ಪಂಚನಾಮೆಯನ್ನು ನಿಪಿ-1 ಎಂದು ಹಾಗೂ ಸದರಿ ದಾಖಲೆಯಲ್ಲಿ ಸಾಕ್ಷಿದಾರರು ಗುರುತಿಸಿದ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನಂತರ ರಾತ್ರಿ ದರೋಡೆಯಾಗಿದ್ದ ವಾಹನವು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಬಿ.ಎಂ. ರಸ್ತೆಯಲ್ಲಿ ನಿಂತಿರುವ ಬಗ್ಗೆ ಬಂದ ಮಾಹಿತಿಯ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ರಿಂದ ಚಾಸಾ-11 ರವರನ್ನು ಬರಮಾಡಿಕೊಂಡು, ಅವರ ಸಮಕ್ಷಮ ಮಧ್ಯಾಹ್ನ 12.00 ರಿಂದ 1.00 ಗಂಟೆಯ ನಡುವೆ ಅಮಾನತು ಪಂಚನಾಮೆಯನ್ನು ಜರುಗಿಸಿರುತ್ತೇನೆ ಹಾಗೂ ನಂತರ ಅಮಾನತು ಪಂಚನಾಮೆ ಜರುಗಿಸಿದ ಸ್ಥಳದಲ್ಲಿದ್ದ ಲಾರಿಯ ಕ್ಯಾಬಿನ್‌ನಲ್ಲಿ ಬಿದ್ದಿದ್ದಂತಹ 2 ಲಾಂಗ್‌ಗಳು, ಎಡಬದಿಯಲ್ಲಿ ಲಾರಿಯ ಕ್ಯಾಬಿನ್‌ನಲ್ಲಿ ಬಿದ್ದಿದ್ದಂತಹ ಗಾಜಿನ ಚೂರುಗಳು ಹಾಗೂ ಟಪಾಲು ಬಿಲ್ಲುಗಳನ್ನು ಹಾಗೂ ಲಾರಿಯಲ್ಲಿ ತುಂಬಿದ್ದ ಕಬ್ಬಿಣದ ಲೋಡನ್ನು ಅಮಾನತು ಪಂಚನಾಮೆಯಡಿಯಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಲಾರಿ ಸಮೇತ ಅಮಾನತುಪಡಿಸಿಕೊಂಡಿರುತ್ತೇನೆ. ಅಮಾನತು ಪಂಚನಾಮೆಯನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡತ್ತಿದ್ದು ಗುರುತಿಸುತ್ತೇನೆ. ಅಮಾನತು ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸದರಿ ದಾಖಲೆಯಲ್ಲಿ ಸಾಕ್ಷಿದಾರರು ಗುರುತಿಸಿದ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

4. ನಂತರ ಕಬ್ಬಾಳಮ್ಮ ವೇ ಬ್ರಿಡ್ಜ್ ನಲ್ಲಿ ಲಾರಿಯನ್ನು ಕಬ್ಬಿಣದೊಂದಿಗೆ ತೂಕ ಮಾಡಿಸಿದಾಗ 14,750/- ಕೆ.ಜಿ ತೂಕ ಬರುತ್ತದೆ.

ನಂತರ ಸದರಿ ಸ್ವತ್ತುಗಳನ್ನು ಪಿ.ಎಫ್ ನಂ.96/2008 ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಿ.ಎಫ್ ಅನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಚಾಸಾ-2 ರವರ ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಗಳ ಪತ್ತೆಗಾಗಿ ಎ.ಎಸ್.ಐ ರವರ ನೇತೃತ್ವದಲ್ಲಿ ತಂಡವನ್ನು ರಚಿಸಿರುತ್ತೇನೆ.

5. ದಿನಾಂಕ 02.07.2008 ರಂದು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಲಾರಿಯನ್ನು ಅಬ್ದುಲ್ ನಯೀಬ್‌ಗೆ ಹಾಗೂ ಕಬ್ಬಿಣದ ಮಾಲನ್ನು ಕೇರಳ ಟ್ರಾನ್ಸ್ ಪೋರ್ಟ್ ಕಂಪನಿ, ಬೆಂಗಳೂರು ಇವರಿಗೆ ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 09.09.2008 ರಂದು ಸಿ.ಸಿ.ಬಿ., ಬೆಂಗಳೂರು ಇಚರು ಚನ್ನಮ್ಮ ಅಚ್ಚುಕಟ್ಟು ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 178/2008 ಕಲಂ 399, 402 ಐ.ಪಿ.ಸಿ., ಅಡಿಯಲ್ಲಿ ಈ ಪ್ರಕರಣದ ಆರೋಪಿಗಳನ್ನು ಹಾಗೂ 2439 ಕೆ.ಜಿ ತೂಕದ ಕಬ್ಬಿಣದ ಮಾಲುಗಳನ್ನು ಹಾಗೂ ಪ್ರಕರಣದ ದಾಖಲಾತಿಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ವರ್ಗಾವಣೆ ಮಾಡಿದ್ದು, ಅದನ್ನು ಚಾಸಾ-26 ರವರು ಸ್ವೀಕರಿಸಿರುತ್ತಾರೆ. ಸದರಿ ಪ್ರಕರಣದ ಪ್ರಥಮ ವರ್ತಮಾನ ವರದಿದಿಯನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ಪ್ರಕರಣದ ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ಈಗ ನೋಡಿತ್ತಿದ್ದು ಗುರುತಿಸುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-4 ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯೊಂದಿಗೆ ನೀಡಲಾಗಿದ್ದ ಪಂಚನಾಮೆಯ ಯಥಾ ನಕಲನ್ನು ನಿಪಿ-5 ಎಂದು ಹಾಗೂ ಅದಕ್ಕೆ ಸಂಬಂಧಿಸಿದ ಪಿ.ಎಫ್ ನಂ.49/2008 ನ್ನು ನಿಪಿ-6 ಎಂದು, ಪಿ.ಎಫ್ ನಂ.142/2008 ನ್ನು ನಿಪಿ-7

ಎಂದು ಗುರುತಿಸಲಾಯಿತು.

6. ನಂತರ 1 ರಿಂದ 4 ನೇ ಆರೋಪಿಗಳಿಗೆ ಬಾಡಿ ವಾರಂಟ್ ಕೋರಿ, ಇಲ್ಲಿನ ನ್ಯಾಯಾಲಯಕ್ಕೆ ನಿವೇದನೆ ಮಾಡಿಕೊಂಡಿರುತ್ತೇನೆ. ದಿನಾಂಕ 01.12.2008 ರಂದು ಸಾಕ್ಷಿದಾರರಾದ ರಮೇಶ್.ಟಿ.ಡಿ ರವರಿಗೆ ವಿಚಾರಣೆಗೆ ಹಾಜರಾಗಲು ನೋಟಿಸನ್ನು ಜಾರಿ ಮಾಡಿರುತ್ತೇನೆ. ದಿನಾಂಕ 15.12.2008 ರಂದು ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.